ಪುತ್ತೂರು ನಗರ ಪ್ರಾಧಿಕಾರ ರಚನೆಯಿಂದಾಗಿ ಆಗುತ್ತಿರುವ ತೊಂದರೆ.

1985(2068)

ಶ್ರೀ ಸದಾನಂದಗೌಡ(ಪುತ್ತೂರು): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪುತ್ತೂರು ನಗರ ಪ್ರಾಧಿಕಾರದ ರಚನೆಯಿಂದಾಗಿ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಆ ಪ್ರಾಧಿಕಾರದ ರಚನೆಯಿಂದಾಗಿ, ಅದರ ವ್ಯಾಪ್ತಿಗೆ ಒಳಪಡುವ ಪುತ್ತೂರು ತಾಲ್ಲೂಕಿನ ಕೆಲವು ಗ್ರಾಮ ಪಂಚಾಯ್ತಿಗಳ ಅಧ್ಯಕ್ಷರು, ಪ್ರಾಧಿಕಾರದ ವ್ಯಾಪ್ತಿಗೆ ತಮ್ಮ ಗ್ರಾಮಗಳನ್ನು ಸೇರಿಸಿರುವುದರ ವಿರುದ್ಧ ರಾಜ್ಯ ನಗರ ಯೋಜನಾ ಪ್ರಾಧಿಕಾರದ ಜಂಟಿ ನಿರ್ದೇಶಕರು ಈ ಸಂಬಂಧ ಪುತ್ತೂರಿನಲ್ಲಿ ಕರೆದ ಸಭೆಯಲ್ಲಿ ನೀಡಿರುವ ಆಕ್ಷೇಪ ಸಂಬಂಧ ಸರ್ಕಾರ ಕೈಗೊಂಡ ಕ್ರಮವೇನು?

ಇ) ಸಾರ್ವಜನಿಕರಿಗೆ ಬೇಡವಾದ ಈ ಪ್ರಾಧಿಕಾರವನ್ನು ಸರ್ಕಾರವು ರಚಿಸಿರುವುದರ ಉದ್ದೇಶವೇನು?

ಈ) ಸಾರ್ವಜನಿಕರಿಗೆ ಹಾಗೂ ಸ್ಥಳೀಯ ಸಂಸ್ಥೆಗಳಾದ ಗ್ರಾಮ ಪಂಚಾಯಿತಿಗಳಿಗೆ ಬೇಡವಾದ ಈ ಪ್ರಾಧಿಕಾರವನ್ನು ರದ್ದುಪಡಿಸಲು ಸರ್ಕಾರಕ್ಕೆ ಇರುವ ತೊಂದರೆ ಏನು?

ಉ) ಈಗಾಗಲೇ ಪ್ರಾಧಿಕಾರವನ್ನು ರದ್ದು ಪಡಿಸಲು ಕ್ರಮ ಕೈಗೊಳ್ಳಲಾಗಿದೆಯೇ;

ಊ) ಇಲ್ಲವಾದಲ್ಲಿ ರದ್ದುಗೊಳಿಸಲು ಎಂದಿನಿಂದ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು):

ಅ) ಇಲ್ಲ. ಆದರೆ, ನಗರ ಯೋಜನಾ ಪ್ರಾಧಿಕಾರ ರಚನೆಯ ಬಗ್ಗೆ ವಿರೋಧಿಸಿ ಕೆಲವರು ಸಲ್ಲಿಸಿದ್ದ ಆಕ್ಷೇಪಣೆಗಳು ಸರ್ಕಾರದಲ್ಲಿ ಸ್ವೀಕರಿಸಲ್ಪಟ್ಟಿವೆ.

ಆ) ನಗರ ಯೋಜನಾ ಜಂಟಿ ನಿರ್ದೇಶಕರು ವಿಭಾಗೀಯ ಕಛೇರಿ, ಮೈಸೂರು ಇವರು ಯಾವುದೇ ಸಭೆಯನ್ನು ಕರೆದಿರುವುದಿಲ್ಲ. ಆದರೆ, ಅವರ ಇಲಾಖಾ ಪ್ರವಾಸ ಸಮಯದಲ್ಲಿ ಕೆಲವು ಸಾರ್ವಜನಿಕರು ನಗರ ಯೋಜನಾ ಪ್ರಾಧಿಕಾರದ ವಿಸ್ತರಣೆ ಕುರಿತು ಆಕ್ಷೇಪಣೆಗಳನ್ನು ಮಾಡಿರುತ್ತರೆ. ಇವುಗಳು ಸರ್ಕಾರದ ಪರಿಶೀಲನೆಯಲ್ಲಿವೆ.

ಇ, ಈ, ಉ ಮತ್ತು ಊ) ಪುತ್ತೂರು ಪಟ್ಟಣ ಮತ್ತು ಪರಿಸರದ ಯೋಜಿತ

ಬೆಳವಣಿಗೆಗಾಗಿ ಮತ್ತು ಸಾರ್ವಜನಿಕರ ಹಿತಕ್ಕಾಗಿಯೇ ಯೋಜನಾ ಪ್ರಾಧಿಕಾರವನ್ನು ರಚಿಸಲಾಗಿದೆ. ಆದಾಗ್ಯೂ ಘನ ಉಚ್ಚನ್ಯಾಯಾಲಯವು ತಾತ್ಕಾಲಿಕ ತಡೆಯಾಜ್ಞೆ ನೀಡಿರುತ್ತದೆ. ಆದ ಕಾರಣ ಅದನ್ನು ಈ ಹಂತದಲ್ಲಿ ರದ್ದು ಪಡಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ತ್ರಿಶಂಕು ಸ್ಥಿತಿಯಲ್ಲಿ ಕುಡುಬಿ ಜನಾಂಗ.

1986(2070)

ಶ್ರೀ ಸದಾನಂದಗೌಡ ಡಿ.ವಿ.(ಪುತ್ತೂರು): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಬುಡಕಟ್ಟು ಜನಾಂಗಗಳಲ್ಲೊಂದಾದ ಕುಡುಬಿ ಜನಾಂಗ ತ್ರಿಶಂಕು ಸ್ಥಿತಿಯಲ್ಲಿರುವುದೇ?

ಆ) ಈ ಜನಾಂಗ ಯಾವ ಭಾಗದಲ್ಲಿ ಹೆಚ್ಚಾಗಿ ನೆಲೆಸಿದ್ದಾರೆ? ಇವರ ಜನಸಂಖ್ಯೆ ಎಷ್ಟು?

ಇ) ಇವರಿಗೆ ಸರ್ಕಾರ ವಿಶೇಷ ಸೌಲಭ್ಯಗಳನ್ನು ಕಲ್ಪಿಸಿದೆಯೇ?

ಈ) ಕುಡುಬಿ ಜಾತಿಯನ್ನು ಪರಿಶಿಷ್ಟ ವರ್ಗಕ್ಕೆ ಸೇರ್ಪಡೆಗೊಳಿಸಿಲ್ಲವೇ?

ಉ) ಈ ಜನಾಂಗದ ಸರ್ವಾಂಗೀಣ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಹಿಂದುಳಿದ ವರ್ಗಗಳ ಪ್ರವರ್ಗ I ರಲ್ಲಿ ಈ ಸಮುದಾಯವು ಹಾಲಿ ಇರುವುದು.

ಆ) ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಬಂಟ್ವಾಳ ತಾಲ್ಲೂಕು ಹಾಗೂ ಉಡುಪಿ, ಕಾರ್ಕಳ ಮತ್ತು ಕುಂದಾಪುರ ತಾ: ಭಾಗದಲ್ಲಿ ವಾಸಿಸುತ್ತಿರುತ್ತಾರೆ. ಇವರ ಜನಸಂಖ್ಯೆ ಮಾರ್ಚ್ 94ಕ್ಕೆ 27694 ಎಂದು ಅಂದಾಜಿಸಿದೆ.